# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಸಂಪರ್ಕ ವಿಭಾಗ, ನರಸಿಂಹರಾಜ ವೃತ್ತ, ಬೆಂಗಳೂರು-560 002**

***ಪತ್ರಿಕಾ ಪ್ರಕಟಣೆ*** **ದಿನಾಂಕ: 28.10.2011**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ 800 ಚ.ಕಿ.ಮೀ. ವ್ಯಾಪ್ತಿಯಲ್ಲಿ ಪ್ರತಿನಿತ್ಯ ಸುಮಾರು 3000 ದಿಂದ 3500 ಟನ್ ಕಸವನ್ನು ಸಂಗ್ರಹಿಸಿ ತ್ಯಾಜ್ಯ ವಿಲೇವಾರಿ ಕೈಗೊಳ್ಳುತ್ತಿದ್ದು, ಪ್ರಮುಖ ಹಬ್ಬಗಳಂದು ವಿಶೇಷವಾಗಿ ಯುಗಾದಿ, ಆಯುಧಪೂಜೆ, ವಿಜಯದಶಮಿ ಹಾಗೂ ದೀಪಾವಳಿಗಳಂದು ಬಾಳೆಕಂದು, ಹೂವು, ಹಣ್ಣು, ತರಕಾರಿಗಳು ಹಾಗೂ ಪಟಾಕಿಗಳಿಂದ ಕನಿಷ್ಠ 800 ರಿಂದ 1000 ಟನ್‌ಗೂ ಹೆಚ್ಚುವರಿಯಾಗಿ ಘನತ್ಯಾಜ್ಯ ಸಂಗ್ರಹವಾಗುತ್ತದೆ. ಹೀಗೆ ಸಂಗ್ರಹವಾಗುವ ತ್ಯಾಜ್ಯವನ್ನು ಲಭ್ಯವಿರುವ ವಾಹನಗಳ ಮೂಲಕ ಹೆಚ್ಚುವರಿ ಟ್ರಿಪ್‌ಗಳನ್ನು ಮಾಡಿ, ವಿಲೇವಾರಿ ಮಾಡಲಾಗುತ್ತಿದೆ. ಈ ರೀತಿ ಉತ್ಪತ್ತಿಯಾದ ತ್ಯಾಜ್ಯವನ್ನು ವಿಲೇವಾರಿ ಮಾಡಲು 2 ರಿಂದ 3 ದಿನ ಬೇಕಾಗುತ್ತದೆ.

ಈ ದೀಪಾವಳಿಯಂದು ಕೆ.ಆರ್. ಮಾರುಕಟ್ಟೆಯಲ್ಲಿ ಪ್ರತಿದಿನ ಸಂಗ್ರಹವಾಗುವ 60 ರಿಂದ 70 ಟನ್ ಘನತ್ಯಾಜ್ಯಕ್ಕಿಂತ 175 ಟನ್ ಸಂಗ್ರಹವಾಗಿದ್ದು, ಹೆಚ್ಚುವರಿ ವಾಹನಗಳಿಂದ ತ್ಯಾಜ್ಯ ವಿಲೇವಾರಿಗೆ ಈಗಾಗಲೇ ಕ್ರಮ ಕೈಗೊಳ್ಳಲಾಗಿದೆ.

ನಗರದ ಬೇರೆ ಪ್ರಮುಖ ಮಾರುಕಟ್ಟೆಗಳಾದ ಜಯನಗರ, ಮಲ್ಲೇಶ್ವರ, ಯಶವಂತಪುರ, ಕೆ.ಆರ್.ಪುರಂ, ಫ್ರೇಜರ್‌ಟೌನ್, ಜೆ.ಪಿ. ನಗರ, ಬನಶಂಕರಿ, ಶೇಷಾದ್ರಿಪುರಂ ಮುಂತಾದ ಕಡೆ ಪ್ರತಿನಿತ್ಯದ ತ್ಯಾಜ್ಯ ಉತ್ಪತ್ತಿಗಿಂತಲೂ 25 ರಿಂದ 30 ಟನ್‌ಗಳಷ್ಟು ಹೆಚ್ಚಿಗೆ ತ್ಯಾಜ್ಯ ಉತ್ಪತ್ತಿಯಾಗಿದೆ.

ಮಾವಳ್ಳಿಪುರ, ಮಂಡೂರು, ಚಿಮ್ಮಸಂದ್ರ, ಟೆರಾಫಾರ್ಮ್‌ಗಳಲ್ಲಿರುವ ವೈಜ್ಞಾನಿಕ ತ್ಯಾಜ್ಯ ಘಟಕಗಳಲ್ಲಿ ದಿನಗಿಂತಲೂ 200 ಲಾರಿ ಲೋಡ್‌ಗಳಷ್ಟು ಹೆಚ್ಚಿನ ತ್ಯಾಜ್ಯ ವಿಲೇವಾರಿ ಮಾಡಲಾಗಿದೆ. ನಾಳೆ ಒಳಗಾಗಿ ಎಲ್ಲಾ ತ್ಯಾಜ್ಯವನ್ನು ವಿಲೇವಾರಿಗೆ ಹಾಗೂ ಸ್ವಚ್ಛತೆಗೆ ಕ್ರಮ ಕೈಗೊಳ್ಳಲಾಗಿದೆ ಎಂದು ಪಾಲಿಕೆ ಆಯುಕ್ತರು ತಿಳಿಸಿದ್ದಾರೆ.

**ಸಾರ್ವಜನಿಕ ಸಂಪರ್ಕಾಧಿಕಾರಿ**